ಕರ್ಕಿ ಕೃಷ್ಣಮೂರ್ತಿ

# ಸಮಾಧಿ ಶಿವು



ಬಿಲ್ಡಿಂಗಿನ ಪೋರ್ಟಿಕೋ ಎದುರು ನಿಂತ ಮರ್ಸಿಡೀಸ್ ಕಾರಿನಿಂದ ಆದಷ್ಟು ನಿಧಾನವಾಗಿ ಇಳಿಯುತ್ತಾ ತನ್ನನ್ನು ಯಾರಾದರೂ ನೋಡುತ್ತಿದ್ದಾರೋ ಎಂದು ಸುತ್ತಲೂ ಗಮನಿಸಿದ ಶಿವರಾಜ. ನಂತರ ಬಿಲ್ಡಿಂಗಿನ ಲಾಬಿ, ಲಿಫ್ಟು, ಹನ್ನೆರಡನೇ ಫ್ಲೋರು, ಆಫೀಸು. ಆತನಿಗೆ ಗೊತ್ತಿರುವವರಾರೂ ಎದುರಾಗಲಿಲ್ಲ. ಒಳಬರುತ್ತಿರುವಂತೆ ಸ್ವಾಗತಕಾರಿಣಿಯನ್ನು ತಾನೇ ಮಾತನಾಡಿಸಿದ. ನೇರ ಪ್ಯಾಂಟ್ರಿಗೆ ಹೋದವನೇ ಅಲ್ಲಿದ್ದ ಹುಡುಗರ ಮೇಲೆ ಹರಿಹಾಯ್ದ. 'ಎಷ್ಟ್ ಸಲಾ ಹೇಳೀದೀನಿ, ಟೀ ಕುಡ್ದಿರೋ ಕಪ್ಪನ್ನಾ ಸಿಂಕಲ್ಲಿ ಹಾಗೇ ಇಡಬೇಡಿ ಅಂತಾ. ತರ್ತಾ ಇದ್ದಾಂಗೆ ತೊಳೆದು ಬಿಡಬೇಕು.' ನಂತರ ಫೋಟೊಕಾಪಿ ಯಂತ್ರದ ಹತ್ತಿರ ಹೋಗಿ ಅಲ್ಲಿ ಹರಡಿದ್ದ ಹಾಳೆಗಳನ್ನೆಲ್ಲಾ ಎತ್ತಿಕೊಳ್ಳುತ್ತಾ 'ಎಷ್ಟ್ ಪೇಪರ್ ವೇಸ್ಟ್ ಮಾಡ್ತಾರೆ. ಬೇಕಾದ್ರಷ್ಟೇ ಪ್ರಿಂಟ್ ಕೊಡ್ಬೇಕು ಅನ್ನೋ ಗ್ಯಾನಾ ಯಾರಿಗೂ ಇಲ್ಲ' ಅಂತಾ ಸಣ್ಣಗೆ ಗೊಣಗಿಕೊಂಡ.